## ಹಾರ್ನ್‌ಬಿಲ್ ಜಾರುಬಂಡೆ



ಪಶ್ಚಿಮಘಟ್ಟ ಅರಣ್ಯದ ಅಪರೂಪದ ಪಕ್ಷಿ, ಹಾರ್ನ್‌ಬಿಲ್ ಅಥವಾ ಮಂಗಟ್ಟೆ ಹಕ್ಕಿಗಳ ತವರೂರು ದಾಂಡೇಲಿ. ಅಲ್ಲಿನ ಮೌಳಂಗಿ ಪರಿಸರ ಉದ್ಯಾನದಲ್ಲಿ ಮಕ್ಕಳ ನೆಚ್ಚಿನ ಚಟುವಟಿಕೆಯಾದ ಜಾರುಬಂಡೆಯನ್ನು ಮಂಗಟ್ಟೆ ಹಕ್ಕಿಯ ಆಕಾರದಲ್ಲೇ ಅತ್ಯಂತ ವಿಶಿಷ್ಟವಾಗಿ ನಿರ್ಮಿಸಲಾಗಿದೆ. ಮಕ್ಕಳಿಗೆ ಆಟದ ಮಜದ ಜೊತೆಗೆ ಇಲ್ಲಿನ ಪರಿಸರದ ವಿಶಿಷ್ಟ ಪಕ್ಷಿಯೊಂದರ ಪರಿಚಯ ಮಾಡಿಕೊಡುವ ಅರಣ್ಯ ಇಲಾಖೆಯ ಈ ಶ್ರಮ ಶ್ಲಾಘನೀಯ.

—ಎಚ್.ಎಸ್. ನವೀನಕುಮಾರ್, ಹೊಸದುರ್ಗ

## ಕೇಸರಿ ಅಣಬೆ



ಅಣಬೆ ಸಾಮಾನ್ಯವಾಗಿ ಬಿಳಿ ಇರುವುದನ್ನು ನಾವು ಕಂಡಿದ್ದೇವೆ. ಆದರೆ, ಕೇಸರಿ ಬಣ್ಣದ ಅಣಬೆ ಕಾಣಸಿಗುವುದು ಬಲು ಅಪರೂಪ. ಇತ್ತೀಚೆಗೆ ನಾವು ಜೋಗ ಪ್ರವಾಸಕ್ಕೆ ಹೋಗುವಾಗ ಮಾರ್ಗಮಧ್ಯದ ಕಾಡಿನ ಅಂಚಿನಲ್ಲಿ ತಿಂಡಿ ತಿನ್ನಲು ಇಳಿದೆವು. ಹಾಗೇ ಕಾಡಿನ ಒಳಗೆ ಹೋದಾಗ ಅಲ್ಲಿ ಒಂದು ಕಡೆ ಈ ಕೇಸರಿ ಬಣ್ಣದ ಅಣಬೆಗಳ ಗುಂಪು ಕಾಣಿಸಿತು. ನಾನು ಎಂದೂ ಇಂಥಾ ಅಣಬೆಯನ್ನು ನೋಡಿರಲಿಲ್ಲ. ಬಲು ಅಚ್ಚರಿ ಅನಿಸಿತು. ಇದು ತಿನ್ನಲು ಯೋಗ್ಯವೋ ಏನೋ ಗೊತ್ತಿಲ್ಲ. ಆದರೆ, ಕಣ್ಣಿಗೆ ಮಾತ್ರ ಒಳ್ಳೆಯ ಆಹಾರವಾಯಿತು. ಮಲೆನಾಡಿನ ಸಹ್ಯಾದ್ರಿ ಸೆರಗು ತನ್ನ ಒಡಲಲ್ಲಿ ಇಂತಹ ಹಲವು ವಿಶಿಷ್ಟತೆಗಳನ್ನು ಇಟ್ಟುಕೊಂಡಿದೆ.

—ಎಸ್.ಎನ್. ಸೌಮ್ಯ ನಾಡಿಗ್, ಶಿವಮೊಗ್ಗ

## ಕರವಸ್ತ್ರವೇ ಕರೆಯೋಲೆ...!

ಮದುವೆಗೆ ಮುನ್ನುಡಿಯಂತಿರುವ ಕರೆಯೋಲೆಯಲ್ಲಿ ಅನೇಕ ಬಗೆಯ ವೈವಿಧ್ಯತೆಗಳನ್ನು ನೋಡಿರುತ್ತೇವೆ. ಕೆಲವು ಅದ್ಧೂರಿಯಾಗಿದ್ದರೆ, ಕೆಲವು ಸರಳತೆಯಿಂದ ಕೂಡಿರುತ್ತವೆ. ಇಲ್ಲೊಂದು ವಿಶಿಷ್ಟ, ಸರಳ ವಿವಾಹದ ಕರೆಯೋಲೆ ನೋಡಿ.! ಶುಭ್ರ ಬಿಳಿ ಬಣ್ಣದ ಕಾಟನ್ ಕರವಸ್ತ್ರದಲ್ಲಿ ಮದುವೆಯ ಆಮಂತ್ರಣವನ್ನು ಮುದ್ರಿಸಿದ್ದಾರೆ. ಪೇಪರ್ ರಹಿತವೂ ಆಯ್ತು.. ಕರವಸ್ತ್ರ ಬಳಕೆಗೂ ಸಿಕ್ಕಂತಾಯ್ತು..!

—ಅನು ಬೊಮ್ನಳ್ಳಿ, ಶಿರಸಿ



ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ. ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.
ಇಮೇಲ್ ವಿಳಾಸ: **editorsu@sudha.co.in**